ಕಾಮಗಾರಿಯನ್ನು ಪ್ರಾರಂಭಿಸುವುದು

539 (366) ಶ್ರೀ ಪ್ರತಾಪಗೌಡ ಪಾಟೀಲ್ (ಮಸ್ಕಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಿಂಧನೂರು ಪಟ್ಟಣಕ್ಕೆ ಬೈಪಾಸ್ ರಸ್ತೆ ಕೇಸಿಫ್–1 ರಲ್ಲಿ ಸೇರಿ ವರ್ಲ್ಡ್‌ಬ್ಯಾಂಕ್‌ನಿಂದ ಅನುಮತಿ ಪಡೆದು ಹಾಗೂ ಸರ್ವೆ ಕಾರ್ಯ ಕೂಡ ಪೂರ್ಣಗೊಂಡು ಕೊನೆಯ ಹಂತದಲ್ಲಿ ಕಾಮಗಾರಿಯನ್ನು ಕೈಬಿಡಲು ಕಾರಣವೇನು;

ಆ) ಈ ಯೋಜನೆಯನ್ನು ಮುಂದಿನ ಆಯವ್ಯಯದಲ್ಲಿ ತೆಗೆದುಕೊಳ್ಳಲು ಸರ್ಕಾರದ ಮುಂದೆ ಪ್ರಸ್ತಾವನೆ ಇರುವುದೇ?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ–1 ರಲ್ಲಿ ಪೂರ್ವಭಾವಿ ಅಧ್ಯಯನದ ಮೇರೆಗೆ ಸಿಂಧನೂರು ಪಟ್ಟಣಕ್ಕೆ ಬೈಪಾಸ್ ರಸ್ತೆ ನಿರ್ಮಿಸುವ ಬಗ್ಗೆ ಪ್ರಸ್ತಾವನೆಯನ್ನು ಮಾಡಲಾಗಿತ್ತು. ಆದರೆ ಈ ಬಗ್ಗೆ ವಿವರವಾದ ಯೋಜನಾ ವರದಿಯನ್ನು ತಯಾರಿಸಿರುವುದಿಲ್ಲ. ಈ ಸಮಯದಲ್ಲಿ ಸಿಂಧನೂರಿನಿಂದ ಬೂದಗುಂಪ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ಗುತ್ತಿಗೆದಾರರಿಗೆ ವಹಿಸಲಾಗಿತ್ತು. ಹಾಗೂ ಕಾಮಗಾರಿಯು ಪ್ರಗತಿಯಲ್ಲಿತ್ತು. ಈ ಕಾಮಗಾರಿಯಲ್ಲಿ ಸಿಂದನೂರಿನಲ್ಲಿ ಹಾಲಿ ರಸ್ತೆಯ ಅಭಿವೃದ್ಧಿಯನ್ನು ಸೇರಿಸಲಾಗಿತ್ತು. ಈ ಸಮಯದಲ್ಲಿ ಸಿಂದನೂರು ಪಟ್ಟಣದಲ್ಲಿನ 1.2 ಕಿಮೀ. ರಸ್ತೆಯನ್ನು ಚತುರ್ಥ ಪಥ ರಸ್ತೆಯನ್ನಾಗಿ ವಿಸ್ತರಿಸಿ ಅಭಿವೃದ್ಧಿ ಪಡಿಸಲಾಗಿದೆ.

ಆ) ಈ ಯೋಜನೆಯನ್ನು ಮುಂದಿನ ಆಯವ್ಯಯದಲ್ಲಿ ತೆಗೆದುಕೊಳ್ಳಲು ಸರ್ಕಾರದ ಮುಂದೆ ಪ್ರಸ್ತಾವನೆ ಇರುವುದಿಲ್ಲ.

ಬಿ.ಪಿ.ಎಲ್. ಕಾರ್ಡ್ ವಿತರಣೆ

540 (1008) ಶ್ರೀ ಪ್ರಿಯಕೃಷ್ಣ (ಗೋವಿಂದ ರಾಜನಗರ) : ಮಾನ್ಯ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗೋವಿಂದರಾಜನಗರ ಮತಕ್ಷೇತ್ರ ವ್ಯಾಪ್ತಿಯಲ್ಲಿ ಎಷ್ಟು ಕಡು ಬಡವರಿಗೆ ಬಿಪಿಎಲ್ ಕಾರ್ಡ್ ವಿತರಿಸಲಾಗಿದೆ;

ಆ) ಎಷ್ಟು ಬಾಕಿ ಇದೆ; ಬಿಪಿಎಲ್ ಕಾರ್ಡ್ ವಿತರಣೆ ಮಾಡುವಲ್ಲಿ ಇರುವ ಮಾನದಂಡವೇನು;

ಇ) ಬಿಪಿಎಲ್ ಕಾರ್ಡ್ ವಿತರಣೆಯಲ್ಲಿ ಆಗುತ್ತಿರುವ ವಿಳಂಬಕ್ಕೆ ಕಾರಣವೇನು?

ಶ್ರೀ ಹೆಚ್.ಹಾಲಪ್ಪ (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು) :

ಅ) 16638.

ಆ) ಬಾಕಿ ಇರುವುದಿಲ್ಲ.

ಗ್ರಾಮಾಂತರ ಪ್ರದೇಶದಲ್ಲಿ 12,000/– ರೂ. . . . ಗಳವರೆಗಿನ ವಾರ್ಷಿಕ ವರಮಾನ, ಪಟ್ಟಣ ಪ್ರದೇಶದಲ್ಲಿ 17,000/– ರೂ.ಗಳವರೆಗಿನ ವಾರ್ಷಿಕ ವರಮಾನವುಳ್ಳ ಕುಟುಂಬಗಳು ಬಿಪಿಎಲ್ ಪಡಿತರ ಚೀಟಿಯನ್ನು ಪಡೆಯಲು ಅರ್ಹರು.

ಕೆಳಕಂಡ ಮಾನದಂಡಗಳಿಗೆ ಒಳಪಟ್ಟ ಕುಟುಂಬಗಳು ಅಕ್ಷಯ (BPL) ಪಡಿತರ ಚೀಟಿ ಪಡೆಯಲು ಅರ್ಹರಿರುವುದಿಲ್ಲ.

1. 3 ಹೆಕ್ಟೆರ್ ಒಣ ಭೂಮಿ ಅಥವಾ ತತ್ಸಮಾನವಾದ ನೀರಾವರಿ ಭೂಮಿ ಹೊಂದಿರುವವರು.
2. ಸ್ಥಿರ ದೂರವಾಣಿ ಹೊಂದಿರುವವರು.
3. ಸ್ವಂತವಾಗಿ ಯಾರೇ ಡೀಸಲ್/ ಪೆಟ್ರೋಲ್ ಇಂಧನ ಬಳಸುವ ವಾಹನ ಹೊಂದಿರುವವರು. (ಲೂನಾ/ಟಿವಿಎಸ್ ಹೊಂದಿರುವವರು ಹೊರತುಪಡಿಸಿ)
4. ಬ್ಯಾಂಕ್ / ಸಹಕಾರಿ ಸಂಘಗಳಲ್ಲಿ 1.00 ಲಕ್ಷಕ್ಕೂ ಮೇಲ್ಪಟ್ಟು ಸಾಲ ಪಡೆದಿರುವವರು.
5. ಒಂದು ಬೋರ್‌ವೆಲ್ ಹೊಂದಿ, ನೀರಾವರಿ ಸೌಕರ್ಯ ಪಡೆಯುತ್ತಿರುವವರು.
6. ತಿಂಗಳಿಗೆ ರೂ.1,000ಕ್ಕೆ ಕಡಿಮೆ ಇಲ್ಲದೆ ವೇತನ ಪಡೆಯುವ ಸರ್ಕಾರಿ/ಸರ್ಕಾರೇತರ/ಖಾಸಗಿ ಸಿಬ್ಬಂದಿಗಳು.
7. ಆದಾಯ ತೆರಿಗೆ ಪಾವತಿಸುವವರು.

8. ರಿಜಿಸ್ಟರ್ಡ್ ಕಾಂಟ್ರಾಕ್ಟರ್, ಎಪಿಎಂಸಿ ಟ್ರೇಡರ್ಸ್/ ಕಮೀಷನ್ ಏಜೆಂಟ್ಸ್/ಬೀಜ/ ರಾಸಾಯನಿಕ ಗೊಬ್ಬರ ಇತ್ಯಾದಿಗಳ ಮಾರಾಟಗಾರರು. (ಒಟ್ಟಾರೆ ಸಮೀಕ್ಷೆ ಮಾಡುವ ಸಂದರ್ಭದಲ್ಲಿ ಕುಟುಂಬದ ಜೀವನ ಮಟ್ಟವನ್ನು ಕೂಡ ಸಮೀಕ್ಷೆ ಮಾಡಿ ನಿರ್ಣಯಿಸುವುದು)

ನಗರ ಪ್ರದೇಶದಲ್ಲಿ ಮೇಲ್ಕಂಡ ಮಾನ ದಂಡಗಳ ಜೊತೆಗೆ ಈ ಕೆಳಕಂಡ ಮಾನದಂಡಗಳು ಒಳಗೊಂಡಿರುತ್ತದೆ.

1. 20' X 30' ಚದರ ಅಡಿ ಅಥವಾ ಅದಕ್ಕಿಂತ ಕಡಿಮೆ ಅಳತೆಯುಳ್ಳ ನಿವೇಶನ ಅಥವಾ ಸರ್ಕಾರದ ಯಾವುದೇ ಗೃಹ ನಿರ್ಮಾಣ ಯೋಜನೆ ಅಡಿಯಲ್ಲಿ ಉಚಿತವಾಗಿ ಮನೆ ನೀಡಿರುವ ಕುಟುಂಬಗಳನ್ನು ಬಿಪಿಎಲ್‌ಗೆ ಒಳಪಟ್ಟಿರುವರೆಂದು ಪರಿಗಣಿಸುವುದು.
2. ರಸ್ತೆ ಬದಿಯಲ್ಲಿ ಹಾಗೂ ಸಣ್ಣ ಪ್ರಮಾಣದ ಪೆಟ್ಟಿಗೆ ಅಂಗಡಿ ಗಳನ್ನು ಇಟ್ಟುಕೊಂಡು ಜೀವನೋಪಾಯಕ್ಕಾಗಿ ವ್ಯವಹಾರ ಮಾಡುತ್ತಿರುವವರನ್ನು ಹೊರತು ಪಡಿಸಿ ಉಳಿದ ಸ್ವಂತ ಅಥವಾ ಬಾಡಿಗೆ ಅಂಗಡಿಗಳಲ್ಲಿ ವ್ಯಾಪಾರ ನಡೆಸುತ್ತಿರುವವರು ಎಪಿಎಲ್ ಅಥವಾ ಗೌರವಾನ್ವಿತ ಪಡಿತರ ಚೀಟಿಗೆ ಅರ್ಹರಿರುವರು.
3. ವಾಸದ/ವಾಣಿಜ್ಯ ಉದ್ದೇಶಕ್ಕಾಗಿ ನೀಡಲಾಗಿರುವ ಅಥವಾ ಪಡೆಯಲಾಗಿರುವ ಕಟ್ಟಡಗಳಿಂದ ಬರುವ ಬಾಡಿಗೆ ಮಾಸಿಕ ರೂ.2,000/– ಮೀರುವವರು ಬಿಪಿಎಲ್ ಪಡಿತರ ಚೀಟಿಗೆ ಅರ್ಹರಿರುವುದಿಲ್ಲ.

ಇ) ಎಲ್ಲಾ ಕುಟುಂಬದ ಸದಸ್ಯರ ಭಾವಚಿತ್ರ ಹಾಗೂ ಜೀವಮಾಪಕಗಳ ಸಂಗ್ರಹಣೆಗೆ ಹೆಚ್ಚಿನ ಸಮಯಾವಕಾಶವಾಗಿದೆ. ಆದರೆ ಪಡಿತರ ಚೀಟಿಯ ವಿತರಣೆಯಲ್ಲಿ ವಿಳಂಬವಾಗಿರುವುದಿಲ್ಲ.